ಶ್ರೀ ಬಿ. ಹುಚ್ಚೇಗೌಡ.—ನೀವು ಹಾಗೆ ಹೂಳು ತೆಗೆಸುವುದರಿಂದ, ಕೆಲವರು ದುಡ್ಡು ಕೊಡುತ್ತಾರೆ ಮತ್ತೆ ಕೆಲವರು ನೀವೇ ಮಾಡಬೇಕೆಂದು ಹೇಳುತ್ತಾರೆ; ಈ ವಿಷಯವನ್ನು ನೀವು ಯಾವ ತರಹ ಇತ್ಯರ್ಥಮಾಡುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಗ್ರಾಮಸ್ಥರು ಹೂಳು ತೆಗೆಯುವಕೆಲಸ ಮಾಡದಿದ್ದರೆ ಹಾಗೆ ಮಾಡದೆ ಇರುವ ಜಾಗದಲ್ಲಿ ಅವರಿಂದ ಎಕರೇಜು ಸೆನ್ಸು ವಸೂಲು ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಪರಿಶಿಷ್ಟದ 6ನೇ ಬಾಬಿನಲ್ಲಿ ನೀರಾವರಿ ಬಾವಿಗಳನ್ನು ತೋಡಿಸುವುದಕ್ಕಾಗಿ ಸಹಾಯ ದ್ರವ್ಯ ಎಂದು ಹೇಳಿದೆ; ಈ ಸಹಾಯವನ್ನು ಹಾಗೆಯೇ ಮುಂದುವರಿಸುತ್ತಿದ್ದೀರಾ? ಹಾಗೆಯೇ ಮುಂದುವರಿಸುತ್ತಿದ್ದರೆ ಬಾವಿಯೆನ್ನು ತೋಡಿಸಲು ಯಾವ ರೇಟಿನಂತೆ ಸಹಾಯ ದ್ರವ್ಯವನ್ನು ಕೊಡುತ್ತಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಬಾವಿಗಳನ್ನು ತೋಡಿಸಲು ಸಹಾಯದ್ರವ್ಯಕೊಡುವುದನ್ನು ಮುಂದುವರಿಸಿಕೊಂಡು ಬರುತ್ತಿದ್ದೇವೆ; ಆ ಹಣವನ್ನು ಜಾಸ್ತಿಮಾಡಿದ್ದೇವೆ. ಒಂದು ಬಾವಿಗೆ 250 ರೂಪಾಯಿಗಳಂತೆ ಕೊಡುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಒಂದು ಬಾವಿಗೆ 250 ರೂಪಾಯಿಗಳಂತೆ ಕೊಟ್ಟರೆ ಬಾವಿಯನ್ನು ತೋಡಿಸುವುದಕ್ಕಾಗುತ್ತದೆಯೇ? ಬಾವಿ ತೋಡಿಸುವುದಕ್ಕೆ ಬೇಕಾಗತಕ್ಕ ಪೂರ್ತಿ ಸಹಾಯ ದ್ರವ್ಯವನ್ನು ಬಡ್ಡಿ ಇಲ್ಲದೆ ಕೊಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಕೇಂದ್ರ ಸರ್ಕಾರದ 50:50 ಆಧಾರದ ಮೇಲಿರುವ ಯೋಜನೆಯೊಂದನ್ನು ವರ್ಕ್ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದವರು ಎಷ್ಟು ದುಡ್ಡು ಕೊಡುತ್ತಿದ್ದಾರೋ ಅಷ್ಟೇ ನಾವೂ ಕೊಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಪರಿಶಿಷ್ಟದ 9ನೇ ಬಾಬಿನಲ್ಲಿ ಗೊಬ್ಬರದ ಮಿಶ್ರಣವನ್ನು ಹಂಚುವುದಕ್ಕೆ ತಗಲತಕ್ಕ ವೆಚ್ಚವನ್ನು ತಿಳಿಸಿದ್ದೀರಿ; ಈ ಗೊಬ್ಬರವನ್ನು ಮುಫತ್ತಾಗಿ ಕೊಡುತ್ತೀರಾ ಅಥವಾ ಅದಕ್ಕೆ ಸಬ್‌ಸಿಡಿ ಕೊಡುತ್ತೀರಾ? ಹಾಗೆ ಕೊಟ್ಟರೆ ಅದನ್ನು ಹೇಗೆ ವಾಪಸ್ ತೆಗೆದುಕೊಳ್ಳುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಇದುವರೆಗಿದ್ದ ಯೋಜನೆಯ ಪ್ರಕಾರ ಗೊಬ್ಬರವನ್ನು ಕೊಟ್ಟು ಅದಕ್ಕೆ ಒದಲಾಗಿ ಬತ್ತ ವಾಪಸ್ ಕೊಡಬೇಕು ಎಂದು ಇದೆ.

ಶ್ರೀ ವಿ. ವೆಂಕಟಪ್ಪ (ಚೆನ್ನತಟ್ಟಣ).—ಪರಿಶಿಷ್ಟದಲ್ಲಿ ಕಣ್ವಾ ಜಲಾಶಯದ ಸಂಬಂಧದ ಬಾಕಿ ಕೆಲಸಗಳಿಗಾಗಿ ತಗಲತಕ್ಕ ವೆಚ್ಚವನ್ನು ತಿಳಿಸಿದ್ದೀರಿ. ಆ ಕೆಲಸಗಳು ಯಾವುವು ಎಂಬುದು ತಮಗೆ ಗೊತ್ತೇ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ವಿ. ವೆಂಕಟಪ್ಪ.—ಕಣ್ವಾ ಜಲಾಶಯದ ಕೆಳಗೆ ಕೆಲವು ಜಮೀನುಗಳಿಗೆ ಇನ್ನೂ ನಾಲೆಯನ್ನು ಮಾಡಿಕೊಟ್ಟಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**Sri H. SIDDAVEERAPPA.**—I have not got details for that item Sir; I will supply the details to the Hon'ble Member.

ಶ್ರೀ ವಿ. ವೆಂಕಟಪ್ಪ.—ಅರ್ಕಾವತಿ ನದಿಯಿಂದ ಕಣ್ವಾ ಜಲಾಶಯಕ್ಕೆ ನೀರು ಸರಬರಾಯಿ ಮಾಡಬೇಕೆಂದು ರೈತರು ಕೇಳುತ್ತಿರುವುದು ತಮ್ಮ ಗಮನದಲ್ಲಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಇದೆ.

ಶ್ರೀ ವಿ. ವೆಂಕಟಪ್ಪ.—ಇದನ್ನು ಮಾಡುವುದಕ್ಕೇನಾದರೂ ಯೋಚನೆಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಪರಿಶೀಲನೆ ಮಾಡುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಇಗ್ಗಲೂರು ಹತ್ತಿರ ಕೆರೆಕಟ್ಟಬೇಕೆಂದು ಬಹಳ ದಿವಸಗಳಿಂದ ಕೇಳುತ್ತಿದ್ದಾರೆ. ಇದಕ್ಕೇನಾದರೂ ಏರ್ಪಾಡು ಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಗ್ರೋ ಮೋರ್ ಪುಡ್ ಯೋಜನೆಯಲ್ಲಿ ಈ ವಿಚಾರವನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಯೋಚನೆ ಮಾಡುತ್ತಾರೆ.

---

**Cases relating to transportation of foodgrains without permit.**

*Q.*—142. **Sri K. PUTTASWAMY** (Srirangapatna).—

Will the Government be pleased to state.—

(*a*) the number of cases filed for alleged transporting of foodgrains without permit since 10th April 1952 in each of the districts of the State (information as to the quantity concerned in each case may also be given);

(*b*) the number of such cases that are disposed of by this date by :

(i) conviction ; (ii) either discharge or acquittal; (iii) withdrawal ;

(*c*) the number of cases in which withdrawal was asked for and the reasons for granting or refusing withdrawal of these cases?

*A.*—**Sri H. SIDDAVEERAPPA** (Minister for Home Affairs and Agriculture).—

(*a*) to (*c*) The labour involved in collecting this information is such that it would not be justified by or commensurate with the result.

ಶ್ರೀ ಕೆ. ಪುಟ್ಟಸ್ವಾಮಿ.—ಎಷ್ಟು ಕೇಸುಗಳನ್ನು ಹಾಕಿದೆ ಎಂಬುದನ್ನು ತಿಳಿಸುವುದಕ್ಕಾಗುವುದಿಲ್ಲವೆ?

**Sri A. BHEEMAPPA NAIK** (Molakalmuru).—I rise to a point of order.

**Mr SPEAKER.**—The Hon'ble Minister is answering the supplementary.

After he answers, the Hon'ble Member can raise the point of order.

**Sri H. SIDDAVEERAPPA.**—Please repeat the question.

ಶ್ರೀ ಕೆ. ಪುಟ್ಟಸ್ವಾಮಿ.— ಡಿ. ಎಸ್. ಪಿ. ಗಳಿಗೆ ಬರೆದಿದ್ದರೆ, 1)—1—52ರಿಂದೀಚೆಗೆ ಎಷ್ಟು ಕೇಸುಗಳನ್ನು ಹಾಕಿದೆ ಎಂಬುದನ್ನು ಅವರು ಸರ್ಕಾರಕ್ಕೆ ತಿಳಿಸುತ್ತಿರಲಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಕೆ. ಪುಟ್ಟಸ್ವಾಮಿ.—ಇದರಲ್ಲಿ ಏನು ಅಭಿಪ್ರಾಯ? ಡಿ. ಎಸ್. ಪಿ. ಗಳಿಗೆ ಕಾಗದ ಬರೆದಿದ್ದಿರಾ?

**Sri H. SIDDAVEERAPPA.**—I have been getting reports in a consolidated form.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಪ್ರಶ್ನೆಗಳನ್ನು ಹಾಕಿದ ಮೇಲೆ ಈ ವಿಷಯದಲ್ಲಿ ವಿವರಗಳನ್ನು ಸಂಗ್ರಹ ಮಾಡುವುದಕ್ಕೆ ಡಿ. ಎಸ್. ಪಿ. ಗಳಿಗೆ ಸರ್ಕಾರದವರು ಕಾಗದ ಬರೆದಿದ್ದಾರೆ?

**Sri H. SIDDAVEERAPPA.**—I want notice to answer that.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಪ್ರಶ್ನೆ ಕಳಿಸಿದ ಮೇಲೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ತೆಗೆದುಕೊಂಡಿದ್ದೇವೆ. To collect information that the Hon'ble Member wants.

ಶ್ರೀ ಕೆ. ಪುಟ್ಟಸ್ವಾಮಿ.—ಯಾವ ರೀತಿ ಈ ವಿವರಗಳನ್ನು ಶೇಖರಮಾಡುವುದಕ್ಕೆ ಪ್ರಯತ್ನಮಾಡಿದ್ದೀರಿ?

**Sri H. SIDDAVEERAPPA.**—I am getting the information from the concerned department.

**Mr. SPEAKER.**—The Hon'ble Minister need not answer. There are several methods.

ಶ್ರೀ ಕೆ. ಪುಟ್ಟಸ್ವಾಮಿ.—ಹಾಗಾದರೆ, ಈ ಕೇಸುಗಳಲ್ಲಿ ಎಷ್ಟರಲ್ಲಿ ಶಿಕ್ಷೆಯಾಗಿದೆ, ಎಷ್ಟು withdraw ಮಾಡಿದೆ, ಎಷ್ಟು ಖುರಾಸೆಯಾಗಿದೆ ಎಂಬ ಬಗ್ಗೆ ಅಂಕ ಅಂಶಗಳನ್ನು ಸಂಗ್ರಹಮಾಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.— ಅಂಕಅಂಶಗಳಿಲ್ಲದೇ ಯಿದ್ದುದರಿಂದಲೇ ಮಾನ್ಯ ಸದಸ್ಯರಿಗೆ ಉತ್ತರವನ್ನೊದಗಿಸಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಉತ್ತರವನ್ನೊದಗಿಸಲು ಹೆಚ್ಚು ಶ್ರಮವೆಂದು ತಿಳಿಸಿದ್ದಾರೆ; ಇದಕ್ಕಾಗಿ ವಿಶೇಷ ಸಿಬ್ಬಂದಿ ಬೇಕಾಗುತ್ತದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಇರುವ ಸಿಬ್ಬಂದಿಯಲ್ಲಿ ಸಕಾಲದಲ್ಲಿ ಈ ವಿವರಗಳನ್ನೊದಗಿಸುವುದು ಅಸಾಧ್ಯವೆಂದು ಕಂಡುಬಂತು.

ಶ್ರೀ ಕೆ. ಪುಟ್ಟಸ್ವಾಮಿ.—ಏನು ಕಾರಣಗಳಿಂದ ಅಸಾಧ್ಯವೆಂಬ ಅಭಿಪ್ರಾಯಕ್ಕೆ ಬಂದಿರಿ?

**Sri K. HANUMANTHAIYA** (Chief Minister).—That question has been answered.

**Sri J. MOHAMED IMAM** (Jagalur).—I rise to a point of order.

**Sri A. BHEEMAPPA NAIK.**—I have already risen to a point of order.

**Mr. SPEAKER.**—Yes.

**Sri A. BHEEMAPPA NAIK.**—Can the Government refuse to answer a question on the ground of more labour being involved? If so, I request the Hon'ble Minister to point out the provision of law under which he can refuse to answer a question on the ground of more labour being involved.

**Sri K. HANUMANTHAIYA.**—The phraseology used here is taken out of the rulings given on previous occasions by Speakers. Therefore this phraseology that we have adopted is neither strange nor used for the first time.

**Mr. SPEAKER.**—There is no point of order, A question was put and it was answered.

**Sri A. BHEEMAPPA NAIK.**—The Hon'ble Minister has no right to give an answer of this type.

**Mr. SPEAKER.**—The question was answered.

**Sri A. BHEEMAPPA NAIK.**—The point of order raised was...

**Mr. SPEAKER.**—The Hon'ble Member says it is a point of order. It is no point of order. It is a sort of question and that is answered.

**Sri J. MOHAMED IMAM.**—I have another point of order. The Hon'ble Minister for Food was replying to a question. The Hon'ble Chief Minister intervened and gave a direction to him that the question has been answered and that he need not answer. This power is vested in the Chair. I want a ruling from the Chair whether .....

**Mr. SPEAKER.**—Did he say that?

**Sri J. MOHAMED IMAM.**—He directed.

**Mr. SPEAKER.**—I did not hear.

**Sri K. HANUMANTHAIYA.**—I very much wish we deal with matters more seriously. If a question has already been answered, to say now that it has already been answered is neither giving

(SRI K. HANUMANTHAIYA.)

a direction nor taking away what is called the powers of the Speaker. We, as Ministers have got joint responsility and we are perfectly within our rights to collaborate and give a correct point of view as we see it. I do not want to dilate upon it.

**Sri K. PUTTASWAMY.**—I seek the protection of the Chair. Though the question has been put specifically, Government have not taken sufficient pains to provide fuller answers. I request that if the Hon'ble Minister were to avoid the responsibility and defeat the very purpose for which the question time is meant for, the Chair may kindly direct the Government to furnish fuller answers.

**Sri K. HANUMANTHAIYA.**—I may straightway say that the Hon'ble Member need not seek the protection of the Chair. I have not put him to the necessity of seeking the protection of the Chair. I want to generate what is called good spirit. Therefore I am doing this. If the Hon'ble Member wants, I am prepared to furnish answers. I do not shirk my responsibility. He may either choose or may not choose. There is therefore no necessity for the Chair to give a ruling. I do not want to trouble the Chair either. I place before the Hon'ble Member the alternative. I am, by my conscience, on a safer and firmer ground. I am prepared to furnish answers.

**Mr. SPEAKER.**—The grievance of some of the Hon'ble Members is that no answers are furnished.

ಶ್ರೀ ಹೆಚ್. ಕೆ. ವೀರಣ್ಣಗೌಡ (ಮದ್ದೂರು).—ಇಲ್ಲ ಕೊಟ್ಟರತಕ್ಕ ಉತ್ತರದಿಂದ, ಯಾವ ಪ್ರಯತ್ನ ಮಾಡುವುದರಿಂದಲೂ ಏನೂ ಪ್ರಯೋಜನವಿಲ್ಲವೆಂದು ಅರ್ಥವಾಗುವುದಿಲ್ಲವೆ ?

**Sri K. HANUMANTHAIYA.**—As I said, there are rules to that effect. The labour involved.....

ಶ್ರೀ ಹೆಚ್. ಕೆ. ವೀರಣ್ಣಗೌಡ.—ನಾನು ಹೇಳುವುದನ್ನು ಅರ್ಥಮಾಡಿಕೊಂಡರೆ ತಮ್ಮ ಉತ್ತರಕ್ಕೆ ವಿವರಣೆಯ ಅಗತ್ಯವಿಲ್ಲದೆ ಹೋಗಬಹುದು.

ಶ್ರೀ ಕೆ. ಹನುಮಂತಯ್ಯ.—ಏನು ಪ್ರಯತ್ನಬೇಕೋ ಅದನ್ನು ಮಾಡುತ್ತಿದ್ದೇವೆಂದು ಹೇಳಿದ್ದೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಆದರೆ ಇಲ್ಲ ಕೊಟ್ಟಿರುವ ಉತ್ತರದಿಂದ, ಏನು ಪ್ರಯತ್ನಮಾಡಿದರೂ ಪ್ರತಿಫಲವಿಲ್ಲವೆಂದು ಅರ್ಥವಾಗುತ್ತದೆ.

**Sri K. HANUMANTHAIYA.**—Whatever may be the niceties of the situation if the Hon'ble Member wants information I am prepared to furnish. There is no necessity to beat about the bush.

**Mr. SPEAKER.**—That is enough. The Hon'ble Chief Minister has promised to give information.

---

## Manure loans granted in Bangalore North and Devanahalli Taluks.

*Q.*—277. **Sri K. V. BYRE GOWDA** (Bangalore North).—

Will the Government be pleased to state :—

(*a*) the total amount spent in Bangalore North and Devanahalli Taluks in the nature of manure loans for the last three years ;

(*b*) the interest charged on these loans ;

(*c*) whether they consider the desirability of supplying manures on credit basis through the Multi-purpose Co-operative Society ;

(*d*) the steps taken by them to recover these loans ?

*A.*—**Sri H. SIDDAVEERAPPA** (Minister for Home Affairs and Agriculture).—

(*a*) and (*b*) Nil.

(*c*) No.

(*d*) In view of reply to clause (*a*) this does not arise.

ಶ್ರೀ ಕೆ. ವಿ. ಬೈರೇಗೌಡ.—ವ್ಯವಸಾಯ ಇಲಾಖೆಯಿಂದ ರೈತರು ಗೊಬ್ಬರಕ್ಕಾಗಿ ಏನೂ ಸಾಲ ತೆಗೆದುಕೊಳ್ಳಲಿಲ್ಲವೆ ?

ಅಧ್ಯಕ್ಷರು.—ಈ ಎರಡು ತಾಲ್ಲೂಕುಗಳಲ್ಲಿ ಕಳೆದ ಮೂರು ವರ್ಷಗಳಿಂದ ಏನೂ ಕೊಟ್ಟಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ.

ಶ್ರೀ ಕೆ. ವಿ. ಬೈರೇಗೌಡ.—ತೆಗೆದುಕೊಂಡಿರುವ ಸಂದರ್ಭಗಳಿವೆ, ಸ್ಯಾಮಿ.

ಅಧ್ಯಕ್ಷರು.—ಇದ್ದರೆ ಯಾವುದು ಹೇಳಿ.

ಶ್ರೀ ಕೆ. ವಿ. ಬೈರೇಗೌಡ.—ವ್ಯವಸಾಯ ಇಲಾಖೆಯಿಂದ ಸಾಲ ತೆಗೆದುಕೊಂಡಿರುವ ಸಂದರ್ಭಗಳು ಸರ್ಕಾರದ ಗಮನಕ್ಕೆ ಬರಲಿಲ್ಲವೆ ?

**Sri H. SIDDAVEERAPPA.**—In accordance with the information that I have, there is not any such thing.

ಶ್ರೀ ಕೆ. ವಿ. ಬೈರೇಗೌಡ.—ಸಮಗ್ರಸೇವಾ ಸಂಘಗಳಿಗೆ ಮೊದಲುಗೊಂಡಲೂ ಸಾಲವಾಗಿ ಕೊಡುತ್ತಿರಲಿಲ್ಲವೆ ?